ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

# ಪಶುವೈದ್ಯಕೀಯ ಮಹಾವಿದ್ಯಾಲಯ

ನಂದಿನಗರ, ಅ. ಪೆ. ಸಂಖ್ಯೆ 6, ಬೀದರ – 585 401 (ಕರ್ನಾಟಕ)

ದೂರವಾಣಿ : 08482 – 245106
ಇ-ಮೇಲ್ : deanvcb@gmail.com

ಡೀನ್‌ರವರ ಕಾರ್ಯಾಲಯ

ಸಂಖ್ಯೆ ಡೀನ್/ಪವೈಮ(ಬೀ)/2021-22 ದಿನಾಂಕ 08-06-2021

Veterinary College, BIDAR
Sl. No: 88 Date: 9-6-21

## ಪ್ರಕಟಣೆ

**ವಿಷಯ :** ಗುತ್ತಿಗೆ ಆಧಾರದ ಮೇಲೆ ಭೋಧಕರನ್ನು ನೇಮಕಾತಿ ಕುರಿತು

**ಉಲ್ಲೇಖ:** 1) ಕುಲಸಚಿವರ ಆದೇಶ ಸಂಖ್ಯೆ R/VCB-CT/2020-21/4337 Dated 16-03-21
2) ಸಂಖ್ಯೆ ಹನಿಅ/ಕಪಪಮೀವಿವಿ(ಬಿ)/ಗು.ಸ.ಪ್ರಾ/2021-22/600 ದಿ. 25-05-2021

<><><>

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಬೀದರನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಭೋಧಕ ಸಿಬ್ಬಂದಿಗಳನ್ನು 179 ದಿನಗಳಿಗೆ ಮೀರದಂತೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಅರ್ಹ ಅಭ್ಯಾರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಎಮ್‌ವಿಎಸ್‌ಸಿ ಅಥವಾ ಪಿಎಚ್‌ಡಿ ಹೊಂದಿರಬೇಕು.

| ಕ್ರ ಸ | ಹುದ್ದೆಯ ಹೆಸರು | ವಿಷಯ/ವಿಭಾಗದ ಹೆಸರು | ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಹಾಯಕ ಪ್ರಾಧ್ಯಾಪಕರು | ಪಶುವೈದ್ಯಕೀಯ ಅಂಗರಚನಾಶಾಸ್ತ್ರ (VAN) | 01 |
| 2 | ಸಹಾಯಕ ಪ್ರಾಧ್ಯಾಪಕರು | ಪಶುವೈದ್ಯಕೀಯ ಶಸ್ತ್ರಚಿಕಿತ್ಸೆ ಮತ್ತು ಕ್ಷ-ಕಿರಣ (VSR) | 01 |
| 3 | ಸಹಾಯಕ ಪ್ರಾಧ್ಯಾಪಕರು | ಪಶುವೈದ್ಯಕೀಯ ಸೂಕ್ಷ್ಮಜೀವಾಣುಶಾಸ್ತ್ರ (VMC) | 01 |
| 4 | ಸಹಾಯಕ ಪ್ರಾಧ್ಯಾಪಕರು | ಪಶುವೈದ್ಯಕೀಯ ಚಿಕಿತ್ಸಾಶಾಸ್ತ್ರ (VMD) | 01 |
| | | **ಪಶುವೈದ್ಯಕೀಯ ಚಿಕಿತ್ಸಾ ಸಂಕೀರ್ಣ** | |
| 6 | ಸಹಾಯಕ ಪ್ರಾಧ್ಯಾಪಕರು | ಪಶುವೈದ್ಯಕೀಯ ಚಿಕಿತ್ಸಾಶಾಸ್ತ್ರ (VMD) | 01 |
| 7 | ಸಹಾಯಕ ಪ್ರಾಧ್ಯಾಪಕರು | ಪಶುವೈದ್ಯಕೀಯ ಸ್ತ್ರೀರೋಗ ಮತ್ತು ಪ್ರಸೂತಿಶಾಸ್ತ್ರ (VGO) | 01 |

**ಷರತ್ತು ಮತ್ತು ನಿಭಂಧನೆಗಳು:**

1. **ದಿನಾಂಕ 17-06-2021 ರಂದು ಬೆಳಗ್ಗೆ 10.00 ಗಂಟೆಗೆ** ಡೀನ್‌ರವರ ಕಾರ್ಯಾಲಯ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಸಂದರ್ಶನಕ್ಕೆ ಹಾಜರಾಗುವುದು
2. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಂದರ್ಶನಕ್ಕೆ ಹಾಜರಾಗತಕ್ಕದ್ದು ಮತ್ತು ಪ್ರವಾಸ ಭತ್ಯೆ/ಇತರೆ ಯಾವುದೇ ಭತ್ಯೆಗೆ ಅರ್ಹರಿರುವುದಿಲ್ಲ
3. ಮೇಲೆ ತಿಳಿಸಲಾದ ಹುದ್ದೆಗಳು ಸಂಪೂರ್ಣವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಆಗಿದ್ದು (179 ದಿನಗಳಿಗೆ ಮೀರದಂತೆ) ಈ ಗುತ್ತಿಗೆ ನೇಮಕಾತಿಗೆ ಖಾಯಂ ಮತ್ತು ಹಿರಿತನ ಅರ್ಹತೆಗೆ ಪರಿಗಣಿಸಲಾಗುವುದಿಲ್ಲ, ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿರುವ ಅಭ್ಯಾರ್ಥಿಗಳಿಗೆ ಮುಂಚಿತವಾಗಿ ಯಾವುದೇ ಮಾಹಿತಿ ನೀಡದೆ ಗುತ್ತಿಗೆ ಅವಧಿಯನ್ನು ರದ್ದು ಪಡಿಸುವ ಮತ್ತು ತೆಗೆದುಹಾಕುವ ಹಕ್ಕನ್ನು ಡೀನ್‌ರವರು ಹೊಂದಿರುತ್ತಾರೆ.
4. ಸ್ನಾತಕೋತ್ತರ ಹಾಗೂ ಪಿಎಚ್‌ಡಿ ಹೊಂದಿರುವ ಅಭ್ಯರ್ಥಿಗಳಿಗೆ ರೂ. 57600/-(ರೂ.100/-ನ್ನು ಕಡಿತ ಮಾಡಿ) ಪ್ರತಿ ತಿಂಗಳು ಸಂಭಾವನೆ ನೀಡಲಾಗುವುದು.
5. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ಅಭ್ಯರ್ಥಿಗಳನ್ನು ಅವಶ್ಯಕತೆಗನುಗುಣವಾಗಿ ಡೀನ್‌ರವರು ನಿಗದಿಪಡಿಸಿದ ಕೆಲಸದ ಮೇಲೆ ನಿಯೋಜಿಸಲು ಸಂಪೂರ್ಣ ಹಕ್ಕನ್ನು ಹೊಂದಿರುತ್ತಾರೆ.
6. ಕರ್ನಾಟಕ ರಾಜ್ಯದ ಮೂಲ ನಿವಾಸಿಗಳು ಮತ್ತು ಬಳಕೆ/ವ್ಯವಹಾರಿಕ ಕನ್ನಡದ ಜ್ಞಾನ ಹೊಂದಿರುವ ಅಭ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು
7. ಕಲ್ಯಾಣ ಕರ್ನಾಟಕ/ಹೈದ್ರಬಾದ ಕರ್ನಾಟಕದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

**ಡೀನ್(ಪ್ರವೈ)**
**ಪಶುವೈದ್ಯಕೀಯ ಮಹಾವಿದ್ಯಾಲಯ**
**ನಂದಿನಗರ, ಅ.ಪೆ.ಸಂಖ್ಯೆ 6, ಬೀದರ**

**ಪ್ರ.ಆ:**

1. ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು/ಹಾಸನ/ಶಿವಮೊಗ್ಗ/ಉದಗಿರ/ನಾಗಪೂರ/ಪರಭಣಿ ಮಾಹಿತಿಗಾಗಿ ಮತ್ತು ನಾಮಫಲಕದಲ್ಲಿ ಹಾಕಲು ಕೋರಿದೆ
2. ಮೇಲಿನ ವಿಭಾಗದ ಮುಖ್ಯಸ್ಥರಿಗೆ ಮಾಹಿತಿಗಾಗಿ ಮತ್ತು ಸದರಿ ವಿಷಯವನ್ನು ಪ್ರಚುರ ಪಡಿಸಲು ಕೋರಿದೆ